ಮುತ್ತಿನಂಥ ಮಾತು

ಮನುಷ್ಯನಲ್ಲಿ ಚೈತನ್ಯ ತುಂಬಬಲ್ಲ ಮೂರು ಅಂಶಗಳೇನೆಂದರೆ ಚಾಪೆಯ ಮೇಲೆ ಮಲಗುವುದು, ತಣ್ಣನೆಯ ಗಾಳಿ ಸೇವಿಸುವುದು, ಕಡಿಮೆ ಊಟ ಮಾಡುವುದು.

-ವೆಲ್ಸ್ ಗಾದೆ

ಓದುಗರ ಪತ್ರ

'ಕಡ್ಡಾಯ': ಅಸಲಿಯೋ ನಕಲಿಯೋ?

ಮಾನ್ಯರೆ,

ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ ಮತ್ತು ದೀನ್ ದಯಾಳ್ ಜನ್ಮಶತಾಬ್ದಿ ನೆನಪಿನಲ್ಲಿ ಪ್ರಧಾನಿ ಮೋದಿ ಅವರು ಹೊಸದಿಲ್ಲಿಯಲ್ಲಿ ಮಾಡಿದ ಭಾಷಣದ ನೇರ ಪ್ರಸಾರವನ್ನು ಮೈಸೂರು ವಿವಿ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗವಹಿಸಿ ವೀಕ್ಷಿಸಬೇಕು ಎಂದು ಸುತ್ತೋಲೆ ಹೊರಡಿಸಿದ್ದ ಮೈಸೂರು ವಿವಿ ಹಾಗೂ ಯುಜಿಸಿಯ ನಿರ್ಧಾರಕ್ಕೆ ಈಗ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದ್ದಂತೆ ಮೈಸೂರು ವಿವಿ ಕುಲಸಚಿವರಾದ ಡಿ.ಭಾರತಿ ಅವರು ಸುತ್ತೋಲೆಯಲ್ಲಿ ಬಳಸಲಾಗಿದ್ದ 'ಕಡ್ಡಾಯ' ಎಂಬ ಪದವನ್ನು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಭಾಗವಹಿಸಲಿ ಎಂಬ ಉದ್ದೇಶದಿಂದ ಮಾತ್ರ ಬಳಸಲಾಗಿದೆ. ಎಂದು ಅದರ ಸಮರ್ಥನೆ ಮಾಡಿಕೊಂಡಿದ್ದಾರೆ. (ಆಂ. ಸೆ.೧೨, ೧ನೇ ಪುಟ).

ಈ ಮೂಲಕ ವಿವಿಯಿಂದ ಈಗಾಗಲೇ ಹೊರಡಿಸಿರುವ, ಮುಂದೆ ಹೊರಡಿಸುವ ಯಾವುದೇ ಸುತ್ತೋಲೆ ಅಥವಾ ನೇಮಕಾತಿ ಆದೇಶದಲ್ಲಿ 'ಕಡ್ಡಾಯ' ಎಂಬ ಪದವಿದ್ದರೆ ಅದನ್ನು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಗಂಭೀರವಾಗಿ ಪರಿಗಣಿಸಬೇಕೇ ಬೇಡವೇ ಎಂಬ ಜಿಜ್ಞಾಸೆ ಮೂಡಲು ಕಾರಣವಾಗಿದ್ದಾರೆ. ಏಕೆಂದರೆ ವಿವಿಯಲ್ಲಿ ಈಗಾಗಲೇ ಕಡ್ಡಾಯ ಎಂಬ ಪದದೊಂದಿಗೆ ಅನೇಕ ಸುತ್ತೋಲೆಗಳನ್ನು ಹೊರಡಿಸಲಾಗಿದೆ.

ಉದಾಹರಣೆಗೆ ವಿದ್ಯಾರ್ಥಿಗಳು ಪರೀಕ್ಷೆಗೆ ಕೂರಲು ಕಡ್ಡಾಯ ಹಾಜರಾತಿ ಇರಬೇಕು, ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಕಡ್ಡಾಯವಾಗಿ ಇಂತಿಷ್ಟು ಅಂಕಗಳನ್ನು ಪಡೆಯಲೇಬೇಕು ಎಂಬ ಮಿತಿ, ಕಾಲೇಜುಗಳಲ್ಲಿ ರ್‍ಯಾಗಿಂಗ್ ಅನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ... ಹೀಗೆ ಮತ್ತಷ್ಟು ವಿಷಯಗಳ ಹಿಂದೆ ಇರುವ ಕಡ್ಡಾಯ ಎಂಬ ಪದವನ್ನು ಹೇಗೆ ಪರಿಗಣಿಸಬೇಕು? ಹಾಗಾಗಿ ಕುಲಸಚಿವರು ಯುಜಿಸಿಗೆ ಪತ್ರ ಬರೆದು ಕಡ್ಡಾಯ ಎಂಬ ಪದ ಅಸಲಿಯೋ ನಕಲಿಯೋ ಎಂಬುದನ್ನು ಖಾತರಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳಿಗೆ ಇದೇ ಗೊಂದಲವಾಗಿ ವಿವಿಯ ಯಾವುದೇ ಸುತ್ತೋಲೆಗಳ ಕಡ್ಡಾಯ ಎಂಬ ಪದದ ಮೇಲೆ ಅನುಮಾನ ಮೂಡುವಂತೆ ಮಾಡುತ್ತದೆ, ವಿವಿಗಿರುವ ಗಂಭೀರತೆಗೂ ಧಕ್ಕೆ ಬರುತ್ತದೆ.

-**ಲಂಕೇಶ್ ದೇವನ್**, ಹೊಮ್ಮರಗಳ್ಳಿ, ಎಚ್.ಡಿ.ಕೋಟೆ ತಾ.

ಒಳ್ಳೆಯದನ್ನು ಬಯಸುವುದು ತಪ್ಪೆ?

ಮಾನ್ಯರೆ,

ಪ್ರಧಾನಿ ನರೇಂದ್ರ ಮೋದಿಯವರು ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ ೧೨೫ನೇ ವರ್ಷಾಚರಣೆಯ ಸಂದರ್ಭದಲ್ಲಿ ಮಾಡಿದ ಭಾಷಣ ಸಮಯೋಚಿತವಾಗಿತ್ತು. ಅದರಲ್ಲಿ ರಾಜಕೀಯವೇನೂ ಇರಲಿಲ್ಲ, ಮಾತ್ರವಲ್ಲ, ವಿದ್ಯಾರ್ಥಿಗಳಿಗೆ ತಿಳಿಯಬೇಕಾದ ವಿಷಯವನ್ನು 'ಕಡ್ಡಾಯ'ವಾಗಿ ಯಾದರೂ ತಿಳಿಸಬೇಕೆಂಬ ಅವರ ಹಂಬಲ ಅಭಿನಂದನಾರ್ಹ.

ಒಲ್ಲದ ಗಂಡನಿಗೆ ಮೊಸರಿನಲ್ಲಿಯೂ ಕಲ್ಲು ಎಂಬಂತೆ ಪ್ರಗತಿಪರರೆಂಬ ಹಣೆಪಟ್ಟಿ ಹೊತ್ತವರು ಬೊಬ್ಬೆ ಇಟ್ಟ ಯಾವ ಅಂಶವೂ ಅವರ ಭಾಷಣದಲ್ಲಿರದೆ ಸ್ವಚ್ಛತೆ, ಭಾರತೀಯತೆ, ದೇಶಪ್ರೇಮ, ಶಿಸ್ತು, ಸಂಸ್ಕಾರ ಇವುಗಳನ್ನಷ್ಟೇ ಒಳಗೊಂಡಿತ್ತು. ಇಷ್ಟನ್ನೂ ಒಬ್ಬ ಪ್ರಧಾನಿ ತನ್ನ ದೇಶದ ವಿದ್ಯಾರ್ಥಿಗಳಿಗೆ ತಿಳಿಸಬೇಕೆಂದು ಹಂಬಲಿಸುವುದು, ಅದಕ್ಕೆ ವ್ಯವಸ್ಥೆ ಮಾಡುವುದು ಅಪರಾಧವೇ? ಇಷ್ಟಕ್ಕೂ ಪ್ರಧಾನಿ ದೇಶದ ಜನವೆಲ್ಲಾ ಕೇಳಬೇಕೆಂದೇನೂ ಒತ್ತಡ ತಂದಿರಲಿಲ್ಲ. ವಿದ್ಯಾರ್ಥಿಗಳಿಗೆ ಕೇಳಿಸಬೇಕಾದುದನ್ನು ಒತ್ತಾಯವಾಗಿಯೇ ಕೇಳಿಸಬೇಕಾಗುತ್ತದೆ. ತರಗತಿಗಳಲ್ಲಿ ಶಿಕ್ಷಕರು ಮಾಡುವುದು ಅದನ್ನೇ ಅಲ್ಲವೇ?

ಇಷ್ಟಕ್ಕೂ ಒತ್ತಾಯವಾಗಿ ಕೇಳಲೇಬೇಕೆಂಬ ಆದೇಶ ಮೇಲಿನಿಂದ ಬಂದಿರಲಿಲ್ಲ. ನಾವೇ ವಿದ್ಯಾರ್ಥಿಗಳನ್ನು ಹಿಡಿದಿಡುವ ಉದ್ದೇಶದಿಂದ ಹಾಗೆ ಮಾಡಿದೆವು ಎಂದು ಆಯಾ ವಿಶ್ವ ವಿದ್ಯಾಲಯಗಳ ಕುಲಸಚಿವರು ಹೇಳಿಕೆ ನೀಡಿದ್ದಾರೆ. ಈಗ ಹೇಳಿ, ಪ್ರಗತಿಪರರೆನಿಸಿಕೊಂಡು ಜನರನ್ನು ಎತ್ತಿಕಟ್ಟುವ ಮಾತನಾಡಿದವರು ದೇಶದ ಜನತೆಗೆ ಯಾವ ಸಂದೇಶ ನೀಡುತ್ತಿದ್ದಾರೆ? ತನ್ನ ದೇಶದ ವಿದ್ಯಾರ್ಥಿಗಳೊಂದಿಗೆ ತಾನು ಸಮಾಲೋಚಿಸಿ ವಿಚಾರ ವಿನಿಮಯ ಮಾಡಬೇಕೆಂದು ಪ್ರಧಾನಿ ಹಂಬಲಿಸುವುದು ಸಮಾಜಘಾತಕವೆನಿಸಿದರೆ ಇನ್ನಾವುದು ಸಮಾಜದ ಉದ್ಧಾರ?

ಇನ್ನೊಂದರ್ಥದಲ್ಲಿ ಪ್ರಧಾನಿ ವಿಚಾರಪೂರ್ಣವಾಗಿ, ವಿಷಯಾಧಾರಿತವಾಗಿ ಭಾಷಣ ಮಾಡುತ್ತಾರೆ. ಇದರಿಂದ ವಿದ್ಯಾರ್ಥಿಗಳು, ಜನರ ಮನಸ್ಸನ್ನು ಗೆಲ್ಲುತ್ತಾರೆ. ಸಮಾಜದ ದೃಷ್ಟಿಯಲ್ಲಿ ಈ ಜನರಿಗೆ ತಾವು ಪೇಲವವಾಗಿ ಸಮಾಜ ತಮ್ಮ ಕೈತಪ್ಪುತ್ತದೆ ಎಂಬ ಭಯವಿದೆ. ಹಾಗಾಗಿ ಜನರನ್ನು, ವಿದ್ಯಾರ್ಥಿಗಳನ್ನು ವಿಮುಖರನ್ನಾಗಿಸಲು ಈ ಮಂದಿ ಪ್ರಧಾನಿಯ ಮಾತನ್ನು ಕೇಳದಂತೆ ಮಾಡ ಹೊರಟರು. ಆದರೆ, ಒಳ್ಳೆಯದನ್ನು ಗ್ರಹಿಸುವ ಮಂದಿ ಗ್ರಹಿಸಿಯೇ ತೀರುತ್ತಾರೆ. ಈಗ ಆದುದೂ ಅದೇ.

-**ದೊಡ್ಡಕಮರವಳ್ಳಿ ಸಿದ್ಧಲಿಂಗಪ್ಪ,**
ಜೆ.ಪಿ.ನಗರ, ಮೈಸೂರು.

ವಿನೋಬಾ ರಸ್ತೆಗೆ ಡಾಂಬರು ಹಾಕಿಸಿ

ಮಾನ್ಯರೆ,

ವಿಶ್ವವಿಖ್ಯಾತ ಮೈಸೂರು ದಸರಾ ಸಮೀಪಿಸುತ್ತಿದ್ದರೂ ನಗರಪಾಲಿಕೆ ಗಾಢ ನಿದ್ರೆಯಲ್ಲಿ ಇರುವಂತೆ ಕಾಣುತ್ತದೆ. ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಒಂದಾದ ವಿನೋಬಾ ರಸ್ತೆ ಗುಂಡಿ ಬಿದ್ದು, ಸಾರ್ವಜನಿಕರು ಮತ್ತು ದಸರಾ ವೀಕ್ಷಿಸಲು ಬರುವ ಪ್ರವಾಸಿಗರು ತೀವ್ರ ತೊಂದರೆ ಅನುಭವಿಸುತ್ತಿದ್ದರೆ ಪಾಲಿಕೆ ಇದೇ ರಸ್ತೆಯ ಮೇಲೆ ಜಲ್ಲಿ ಕಲ್ಲುಗಳನ್ನು ಅವೈಜ್ಞಾನಿಕವಾಗಿ ಹಾಕಿದೆ. ಇದರಿಂದ ಈ ರಸ್ತೆಯಲ್ಲಿ ವಾಹನಗಳು ಸಂಚರಿಸುವಾಗ ಕಲ್ಲುಗಳು ಪಾದಚಾರಿಗಳ ಮೇಲೆ ಸಿಡಿಯುವ ಸಂಭವವಿರುತ್ತದೆ. ಜೊತೆಗೆ ನಿತ್ಯ ದೇವರಾಜ ಮಾರುಕಟ್ಟೆಗೆ ಪದಾರ್ಥಗಳನ್ನು ಕೊಳ್ಳಲು ಜನರು ಇದೇ ರಸ್ತೆಯನ್ನು ಅವಲಂಬಿಸಿ ರುತ್ತಾರೆ. ಮಹಾಪೌರರ ವಾರ್ಡಿನ ವ್ಯಾಪ್ತಿಗೆ ಈ ರಸ್ತೆ ಬಂದರೂ ಅಭಿವೃದ್ಧಿ ಕಂಡಿಲ್ಲ.

ಯುದ್ಧ ಕಾಲದಲ್ಲಿ ಸಮರಾಭ್ಯಾಸ ಎಂಬಂತೆ ದಸರೆಯ ಸಮಯದಲ್ಲಿ ಆತುರಾತುರವಾಗಿ ಕೆಲಸ ಮಾಡಿ ಗುಣಮಟ್ಟ ಕಾಯ್ದುಕೊಳ್ಳುತ್ತಾರೆಯೇ ಎಂಬುದೇ ಯಕ್ಷಪ್ರಶ್ನೆಯಾಗಿದೆ.

-**ಪ್ರಮೋದ್** ಗೌಡ,
ಮೈಸೂರು ರಕ್ಷಣಾ ವೇದಿಕೆ, ಮೈಸೂರು.

ಓದುಗರ ಗಮನಕ್ಕೆ

ಪ್ರಕಟಣೆಗೆ ತಮ್ಮ ಪತ್ರ ಬರೆದು ಕಳುಹಿಸುವವರು ಪೂರ್ತಿ ವಿಳಾಸವನ್ನು ಬರೆದು ಕಳುಹಿಸಬೇಕು. ಇಲ್ಲದಿದ್ದರೆ ಪತ್ರವನ್ನು ಪ್ರಕಟಿಸಲಾಗುವುದಿಲ್ಲ. –ಸಂ.

ಗೌರಿ ಲಂಕೇಶ್ ತನ್ನ ನಾಡಿಗೆ ಮಿಡಿದ ಅಗ್ನಿಕನ್ಯೆ

ಆಕೆ ಪ್ರತಿನಿಧಿಸಿದ್ದ ಮೌಲ್ಯಗಳನ್ನೇ ಜನತೆ ಪ್ರತಿನಿಧಿಸಿದೆ

ಲೋಕದ ಚೇಷ್ಟೆ

ಡಾ.ಸಿ.ನಾಗಣ್ಣ

ಸಾಹಿತಿ

ಪ್ರತಿಯೊಂದು ಸಾವೂ ನಮ್ಮನ್ನು ಕಡಿಮೆ ಮಾಡುತ್ತದೆ (ಎವರಿ ಡೆತ್ ಡಿಮಿನಿಷಸ್) ಎಂಬ ಮಾತಿದೆ. ನಮಗೆ ಗುರುತು ಪರಿಚಯವಿಲ್ಲದವರು ತೀರಿಕೊಂಡಾಗಲೂ ನಮ್ಮೊಳಗಿನ ತಂತು ಕಡಿದಂತಾಗುತ್ತದೆ. ಬಂಧು ಬಾಂಧವರು ಹೋದಾಗ ಈ ವೇದನೆ ತೀವ್ರವಾಗುತ್ತದೆ. ತಮ್ಮ ಸಿದ್ಧಾಂತ, ನಂಬಿಕೆ, ಪ್ರಜಾಪ್ರಭುತ್ವದ ಪರವಾದ ಹೋರಾಟದ ಕಾರಣಗಳಿಂದ ಗೌರಿ ಲಂಕೇಶ್ ಒಂದು ರೀತಿ ಬಂಧುವೇ ಆಗಿದ್ದರು. ಒಮ್ಮೆ ಮಾತ್ರ ಅವರೊಡನೆ ಮಾತನಾಡುವ ಪ್ರಸಂಗ ಒದಗಿ ಬಂದಿತ್ತು. ತಂದೆ ಲಂಕೇಶ್ ಗತಿಸಿದ ತರುವಾಯ ಪತ್ರಿಕೆ ಮುಂದುವರಿಸಲು ಗೌರಿ ದೆಹಲಿಯಿಂದ ವಾಪಸ್ಸಾದ ಸಂದರ್ಭ. ಮೈಸೂರಿನ ಲೇಖಕರು ಪತ್ರಿಕೆಗೆ ಬರೆಯಬೇಕೆಂಬುದು ಗೌರಿಯವರ ಆಸೆಯಾಗಿತ್ತು. ಎಚ್.ಎ.ವೆಂಕಟೇಶ್ (ಈಗ ಕಾಂಗ್ರೆಸ್ ಮುಖಂಡರು) ಅವರ ಮೂಲಕ ಕೆಲವರನ್ನು ಸೇರಿಸಿದ್ದರು. ಡಾ.ಕೃಷ್ಣಮೂರ್ತಿ ಹನೂರು, ಸ್ವಾಮಿ ಆನಂದ್, ನಾನು ಮತ್ತಿನ್ನೊಂದಿಬ್ಬರು ಇದ್ದೆವು. ವೆಂಕಟೇಶ್ ಒಂದು ಸಣ್ಣ ಪೀಠಿಕೆಯ ನಂತರ ಗೌರಿಯವರನ್ನು ಮಾತನಾಡಲು ಬಿಟ್ಟರು. ನಾವು ನಿರೀಕ್ಷಿಸಿದ್ದಂತೆ ಗೌರಿ ಮೈಸೂರಿನ ಸಾಹಿತಿಗಳು ಪತ್ರಿಕೆಗೆ ಬರೆಯಬೇಕು ಅಂತ ಸೂಚಿಸಿದರು. ಅದರಲ್ಲೂ ಬುಕ್ ರಿವ್ಯೂಗೆ ಜನ ಸಿಕ್ತಾಯಿಲ್ಲ; ಆ ಕೊರತೆಯನ್ನು ತುಂಬಬೇಕು ಎಂದು ಹೇಳಿದರು. ಆ ಜವಾಬ್ದಾರಿಯನ್ನು ಹೊರಬೇಕೆಂದು ನನ್ನನ್ನು ಕೇಳಿಕೊಂಡರು ಎಂದು ನೆನಪು. ನಾನು ಒಪ್ಪಿದೆ. ಕೆಲವು ದಿನಗಳಲ್ಲಿಯೇ ನನಗೊಂದು ಪುಸ್ತಕ ಬಂತು. ಅದು ಡಾ.ಎನ್.ಎಸ್.ಲಕ್ಷ್ಮೀ ನಾರಾಯಣ ಭಟ್ಟರ ಹೊಸ ಕವನ ಸಂಕಲನ.

ಅತ್ಯಂತ ಶ್ರದ್ಧೆಯಿಂದ ಆ ಪುಸ್ತಕವನ್ನು ವಿಮರ್ಶೆ ಮಾಡಿ ಕಳುಹಿಸಿದೆ. ಲೇಖನ ಮುಂದಿನ ಸಂಚಿಕೆಯಲ್ಲಿ ಅಚ್ಚಾಯಿತು. ಆದರೆ ಅದನ್ನು ಓದಿ ನಾನು ಪೆಚ್ಚಾದೆ. ಕಾರಣ: ನನ್ನ ಬರವಣಿಗೆಯಲ್ಲಿರದಿದ್ದ ವ್ಯಂಗ್ಯ, ಅಣಕ, ಕುಚೋದ್ಯಗಳೆಲ್ಲ ಅದರಲ್ಲಿ ಕಂಡುಬಂದಿತ್ತು. ಭಟ್ಟರು ಇದನ್ನು ಓದಿದರೆ ಏನು ಗತಿ? ಎಂದುಕೊಂಡೆ. ಮುಂದೆ ಯಾವಾಗಲೋ ಭೇಟಿಯಾದಾಗ ಭಟ್ಟರು ಆ ನನ್ನ ಪುಸ್ತಕ ವಿಮರ್ಶೆಯನ್ನು ಕುರಿತು ಪ್ರಸ್ತಾಪಿಸಿದರು. 'ಏನೋ ಆಯಿತು ಬಿಡಿ ಸರ್' ಎಂದು ಅವರಿಗೆ ಸಮಾಧಾನ ಮಾಡಿದೆ. ಹಿರಿಯ ಕವಿ ಕಹಿಯನ್ನು ಪ್ರದರ್ಶಿಸಲಿಲ್ಲ. ತದನಂತರ ಆ ಪತ್ರಿಕೆಗೆ ನಾನು ಬರೆಯಲಿಲ್ಲ. ಗೌರಿ ಲಂಕೇಶ್‌ರನ್ನು ಮತ್ತೆ ಭೇಟಿ ಮಾಡುವ ಪ್ರಸಂಗ ಒದಗಲಿಲ್ಲ.

ಅವರ ಹತ್ಯೆಯಾದಾಗ ಅವರಿಗೆ ಕಂಬನಿ ಮಿಡಿಯುವ ಸಂದರ್ಭದಲ್ಲಿ ಈ ಘಟನೆ ನೆನಪಾಯಿತು. ಅವರನ್ನು ಹತ್ತಿರದಿಂದ ಕಂಡಿದ್ದ ಹಲವರು ಅವರ ಬಗ್ಗೆ ಬರೆದಿದ್ದಾರೆ. ಅದರಲ್ಲಿ ನನಗೆ ಮುಖ್ಯ ಅನಿಸಿದ್ದು ಗೌರಿಯವರ ಮಾಜಿ ಪತಿ ಚಿದಾನಂದ ರಾಜಘಟ್ಟರ ಬರವಣಿಗೆ (ಇದು ಫೇಸ್‌ಬುಕ್‌ನಲ್ಲಿ ಪ್ರಕಟವಾಗಿದೆ); ಹಾಗೆಯೇ ಯೋಗೇಂದ್ರ ಯಾದವ್ ಹಾಗೂ ವಿ.ಎಸ್.ಶ್ರೀಧರ ಅವರ ಬರಹಗಳು. ರಾಜಘಟ್ಟ ಅವರು ಬರೆಯುತ್ತಾರೆ: 'ತಮ್ಮ ಬಗ್ಗೆ ಹರಿದು ಬಂದಿರುವ ಮೆಚ್ಚುಗೆ, ಶ್ಲಾಘನೆಯ ಮಾತುಗಳನ್ನು ಆಕೆಯೇನಾದರೂ ಓದುವಂತಿದ್ದರೆ, ವಿಶೇಷವಾಗಿ ಆತ್ಮ, ಪುನರ್ಜನ್ಮ, ಸ್ವರ್ಗ ಇತ್ಯಾದಿ ಪದಗಳನ್ನು ಕಂಡು ನಕ್ಕುಬಿಡುತ್ತಿದ್ದರು. ನಾವು ಹದಿಹರಯದವರಾಗಿರುವಾಗಲೇ ಸ್ವರ್ಗ, ನರಕ, ಪುನರ್ಜನ್ಮ– ಇತ್ಯಾದಿಗಳೆಲ್ಲ ಅರ್ಥರಹಿತ ಕಗ್ಗವೆಂದು ತೀರ್ಮಾನಿಸಿದ್ದೆವು. ಈ ಭೂಮಿಯ ಮೇಲೆಯೇ ಸಾಕಷ್ಟು ಸ್ವರ್ಗ, ನರಕ ಎಲ್ಲ ಇದೆ; ದೇವರನ್ನು ಆತನ ಪಾಡಿಗೆ ಬಿಟ್ಟು ಬಿಡೋಣ; ಅದು ಕೊಡು, ಇದು ಕೊಡು ಎಂದು ಸುತರಾಂ ಆತನನ್ನು ಹಿಂಸಿಸುವುದು ಬೇಡ ಎಂಬುದು ನಮ್ಮ ನಿಲುವಾಗಿತ್ತು.

'ಯಾವ ಕಾರಣಕ್ಕೂ ಇತರರ ನಂಬಿಕೆಗಳನ್ನು ಅವಹೇಳನ ಮಾಡುವುದೂ ಸಲ್ಲದು ಎಂದು ಒಪ್ಪಂದಕ್ಕೆ ಬಂದಿದ್ದೆವು. ಈ ತರಹ ಒಪ್ಪಂದ ಮಾಡಿಕೊಂಡಿದ್ದರಿಂದ ಮುಂದೆ ಪರಸ್ಪರರ ಅಭಿಪ್ರಾಯಗಳನ್ನು ಗೌರವಿಸುವುದಕ್ಕೆ ಸಾಧ್ಯವಾಯಿತು. ಐದು ವರ್ಷ ಒಬ್ಬರನ್ನೊಬ್ಬರು ಪ್ರೀತಿಸಿ, ಐದು ವರ್ಷ ದಾಂಪತ್ಯ ನಡೆಸಿ ವಿಚ್ಛೇದನವಾಗಿ ೨೭ ವರ್ಷಗಳಾದರೂ ಒಳ್ಳೆಯ ಸ್ನೇಹಿತರಾಗಿ ಉಳಿದೆವು.

'ನಾವು ಭೇಟಿಯಾದದ್ದು ವಿಚಾರವಾದಿಗಳ ಸ್ವರ್ಗವೆಂದೇ ಖ್ಯಾತವಾಗಿದ್ದ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ. ನಮ್ಮ ಪ್ರಾಂಶುಪಾಲರು ಡಾ.ಎಚ್.ನರಸಿಂಹಯ್ಯನವರು. ಅವರು ಮತ್ತು ಶ್ರೀಲಂಕದ ಡಾ.ಅಬ್ರಹಾಂ ಕೊವೂರ್ ವಿಚಾರವಾದಿ ಚಳವಳಿಯ ಪಿತಾಮಹರು. ಅವರ ಪ್ರಭಾವದಿಂದ ಎಲ್ಲವನ್ನೂ ಪ್ರಶ್ನೆ ಮಾಡುವ ಮಾರ್ಗವನ್ನು ನಾವು ಕಲಿತೆವು. ಆ ಕಾಲದಲ್ಲಿ ನಾವಿಬ್ಬರೂ ಒಟ್ಟಿಗೇ ಓದಿದ ಪುಸ್ತಕ ಅಂದರೆ ವಿಲ್ ಡ್ಯುರಾಂಟ್ ಅವರ 'ಸ್ಟೋರಿ ಆಫ್ ಫಿಲಾಸಫಿ' (ದರ್ಶನಶಾಸ್ತ್ರದ ಕಥೆ). ಆಕೆಗಾಗಲೀ ನನಗಾಗಲೀ ಕನ್ನಡ ಚೆನ್ನಾಗಿ ಬರ್ತಾಯಿರ್ಲಿಲ್ಲ; ಹಾಗಾಗಿ ನಮ್ಮ ನುಡಿಯ ಶ್ರೀಮಂತ ಸಾಹಿತ್ಯದಿಂದ ದೂರವಾಗಿ ಗ್ರಹಾಂ ಗ್ರೀನ್, ವೊಡ್‌ಹೌಸ್ ಮುಂತಾದವರ ಪುಸ್ತಕಗಳನ್ನು ಓದತೊಡಗಿದೆವು. ಪ್ರೀಮಿಯರ್ ಬುಕ್ ಶಾಪ್‌ನ ಶಾನ್‌ಭಾಗ್ ಅವರು ನಮಗೆ ಗರಿಷ್ಠ ಪ್ರಮಾಣದ ರಿಯಾಯ್ತಿಯಲ್ಲಿ ಪುಸ್ತಕ ಕೊಡುತ್ತಿದ್ದರು.

'ಕಾಲ ಸರಿದಂತೆ ನಾವು ದಂಪತಿಗಳಾದೆವು; ಆಮೇಲೆ ವಿಚ್ಛೇದನವಾಯಿತು. ಆದರೆ ನಾವು ಒಡನಾಟ ಮುಂದುವರಿಸಿದುದನ್ನು ಕಂಡು ನಮ್ಮ ಗೆಳೆಯರು ಆಶ್ಚರ್ಯಪಡ್ತಾಯಿದ್ದರು. ವಿಚ್ಛೇದನ ಪಡೆಯುವ ದಿನ ನ್ಯಾಯಾಲಯದಲ್ಲಿ ನಾವು ಅಕ್ಕಪಕ್ಕ ನಿಂತಾಗ ನಮ್ಮ ಕೈಗಳು ಹತ್ತಿರವಾಗಿದ್ದವು. ನಮ್ಮ ಕೈ ಬೆರಳುಗಳು ಬೆಸೆದುಕೊಂಡಾಗ 'ನೀವು ಪರಸ್ಪರ ದೂರವಾಗಲು ನಿರ್ಧರಿಸಿದ್ದೀರಿ ಎಂದ ಮೇಲೆ ಈ ಆಪ್ತತೆ ಏಕೆ?' ಎಂದು ವಕೀಲರು ಸ್ವಲ್ಪ ಗಟ್ಟಿಯಾಗೇ ಕೂಗಿದ್ದರು. ವಿಚ್ಛೇದನದ ಪ್ರಕ್ರಿಯೆ ಮುಗಿದ ಮೇಲೆ ಮಹಾತ್ಮಗಾಂಧಿ ರಸ್ತೆಯ ತಾಜ್ ಹೋಟೆಲ್‌ಗೆ ಹೋಗಿ ಮಧ್ಯಾಹ್ನದ ಊಟ ಮಾಡಿದೆವು. ಬದುಕಿನ ವ್ಯಂಗ್ಯದ ಎದುರು ಇಬ್ಬರೂ ಜೋರಾಗಿ ಒಮ್ಮೆ ನಕ್ಕೆವು. ನಾನು ಮೊದಲು ದೆಹಲಿಗೆ ಹೋದೆ, ನಂತರ ಮುಂಬಯಿಗೆ, ತದನಂತರ ವಾಷಿಂಗ್ಟನ್ ಡಿ.ಸಿ.ಗೆ ಹೊರಟುಹೋದೆ. ನಾನು ಹೋದ ಊರಿಗೆಲ್ಲ ಆಕೆ ಬಂದರು. ಈ ಬದುಕು, ಈ ಪ್ರಪಂಚ ಮತ್ತಿನ್ನೆಲ್ಲ ವಿಷಯ ಕುರಿತು ವಾಗ್ವಾದ ಮಾಡಲು ನಾವು ಮುಂದಾಗುತ್ತಿದ್ದೆವು.

'ನಮ್ಮ ಪೋಷಕರು ಸಂಪ್ರದಾಯಸ್ಥರಾದರೂ ನಾವು ವಿಚ್ಛೇದನ ಪಡೆದ ನಂತರವೂ ಗೌರಿಯನ್ನು ತುಂಬಾ ಅಕ್ಕರೆಯಿಂದಲೇ ಕಾಣುತ್ತಿದ್ದರು; ನನಗೆ ಸ್ವಲ್ಪ ಆಶ್ಚರ್ಯವಾಗಿತ್ತು. ನಾವು ಬೇರೆಯಾಗುವ ಆ ದಿನಗಳಲ್ಲಿ ಪ್ರಸಿದ್ಧ ಲೇಖಕರು, ಚಿತ್ರ ನಿರ್ಮಾಪಕರೂ ಆಗಿದ್ದ ಅವರ ತಂದೆ ಪಿ.ಲಂಕೇಶರ ಸಂಪರ್ಕದಲ್ಲಿ ನಾನು ಇದ್ದೆ. ಕಾಲೇಜು ದಿನಗಳಲ್ಲಿ ನಾನು ಮತ್ತು ಗೌರಿ ಒಟ್ಟಿಗೇ ಓಡಾಡುವಾಗ ಲಂಕೇಶರು ಒಡ್ಡಿದ್ದ ಸಾಹಿತ್ಯ ಪರೀಕ್ಷೆಯಲ್ಲಿ ನಾನು ತೇರ್ಗಡೆಯಾಗಿದ್ದೆ; ತರುವಾಯ ಅವರ ಕುಟುಂಬದ ಸದಸ್ಯರಲ್ಲಿ ನಾನು ಸೇರಿ ಹೋಗಿದ್ದೆ.

'ಮದುವೆಯಾಗಿ, ವಿಚ್ಛೇದನವಾದರೂ, ಮತ್ತೆ ಮತ್ತೆ ಭೇಟಿಯಾಗುವುದು ನಿಲ್ಲಲಿಲ್ಲ. ಭೇಟಿಯಾದಾಗಲೆಲ್ಲ ರಾಜಕೀಯ, ಧರ್ಮ, ಸಾಹಿತ್ಯ, ಚಲನಚಿತ್ರ, ಭಾರತ–ಅಮೆರಿಕದ ಬಾಂಧವ್ಯ, ರೈತರ ಸಮಸ್ಯೆ– ಇದರ ಬಗ್ಗೆಯೆಲ್ಲ ಚರ್ಚೆ ನಡೆಯುತ್ತಿತ್ತು. ಇತ್ತೀಚೆಗೆ ಗೌರಿ ಹೋರಾಟದ ಬಗ್ಗೆಯೇ ಯೋಚಿಸುತ್ತಿದ್ದಳು..... ಒಂದೆರಡು ವಾರಗಳ ಹಿಂದೆ ಅಮೆರಿಕಕ್ಕೆ ಬರುತ್ತಿರುವುದಾಗಿ ದೂರವಾಣಿ ಮೂಲಕ ಮಾತನಾಡಿದಳು. ದಿನಗಳು ಕಳೆದವು; ಆಕೆಯಂತೂ ಬರಲಿಲ್ಲ. ನಾನು ನೆನಪಿಸಿದಾಗಲೆಲ್ಲ ಬ್ಯೂಸಿ, ಬ್ಯೂಸಿ ಎನ್ನುತ್ತಿದ್ದಳು.

'ಈಗ ಗೌರಿ ಇಲ್ಲದ ಊರಿಗೆ ಹೋಗಲು ನಾನು ವಿಮಾನ ಏರುತ್ತಿದ್ದೇನೆ. ನೂರಾರು ನೆನಪುಗಳು ಮನಸ್ಸನ್ನು ತುಂಬುತ್ತಿವೆ. ಆಕೆಯನ್ನು ಬಗೆಬಗೆಯಾಗಿ ಬಣ್ಣಿಸುತ್ತಾರೆ: ಎಡಪಂಥಿ, ವಿಚಾರವಾದಿ, ಹಿಂದುತ್ವ–ವಿರೋಧಿ, ಜಾತ್ಯತೀತಳು ಇತ್ಯಾದಿ. ಆದರೆ ಆಕೆಯನ್ನು ನೆನೆದಾಗ ನನ್ನ ಮನಸ್ಸಿನಲ್ಲಿ ಹೊಳೆಯುವ ನುಡಿಯೆಂದರೆ 'ಅಮೇಜ಼ಿಂಗ್ ಗ್ರೇಸ್'– ಇದನ್ನು ಹೇಗೆ ಕನ್ನಡಿಸಬೇಕೋ ಗೊತ್ತಾಗುತ್ತಿಲ್ಲ.'

ಯೋಗೇಂದ್ರ ಯಾದವ್ ಗೌರಿ ಲಂಕೇಶ್‌ರ ಚಿತ್ರ ಕಟ್ಟಿಕೊಡುವುದು ಹೀಗೆ: 'ಗೌರಿ ಲಂಕೇಶ್‌ರ ಚಿಂತನೆಗಳು ಹಾಗೂ ನರೇಂದ್ರ ದಭೋಲ್ಕರ್, ಗೋವಿಂದ್ ಪನ್ಸಾರೆ ಮತ್ತು ಎಂ.ಎಂ.ಕಲಬುರ್ಗಿ ಅವರ ಆಲೋಚನೆಗಳು ಒಂದೇ ಎಂದು ಹೇಳುವುದಕ್ಕಾಗುವುದಿಲ್ಲ. ಗೌರಿ ಅವರಿಗೆ ಬೆಂಬಲ ನೀಡುವವರು ಮತ್ತು ಅವರನ್ನು ವಿರೋಧಿಸುವವರು ಇಬ್ಬರೂ ಆಕೆ ಎಡಪಂಥದವರು ಎಂದುಕೊಂಡಿದ್ದಾರೆ. ಕೆಲವರು ಆಕೆ ನಕ್ಸಲೈಟ್ ಅಂತ ಕೂಡ ಲೂಸಾಗಿ ಮಾತನಾಡಿಕೊಳ್ಳುತ್ತಾರೆ. ಇದು ನಿಜವಲ್ಲ. ಕರ್ನಾಟಕದ ಒಂದು ಘನವಾದ ಬೌದ್ಧಿಕ ಪರಂಪರೆಯ ಪ್ರತಿನಿಧಿ ಗೌರಿ; ಹಾಗಾಗಿ ಅವರ ಚಿಂತನೆಯನ್ನು ಪರಿಚಿತ ಎರಕಕ್ಕೆ ಹಾಕಲು ಬರುವುದಿಲ್ಲ. ಗೌರಿ 'ಲಂಕೇಶ್ ಪತ್ರಿಕೆ'ಯ ಸಂಪಾದಕಿಯಾಗಿ ಅವರ ತಂದೆ ಪಿ.ಲಂಕೇಶ್ ಅವರ ಬಳುವಳಿಯನ್ನು ಆಕೆ ಮುಂದುವರಿಸಿದ್ದು ನಿಜ. ಕನ್ನಡದ ನವ್ಯ ಸಾಹಿತ್ಯ ಪರಂಪರೆಯ ಮುಂಚೂಣಿ ಬರಹಗಾರರಲ್ಲಿ ಲಂಕೇಶ್ ಒಬ್ಬರಾಗಿದ್ದರು. ರಾಮ್ ಮನೋಹರ್ ಲೋಹಿಯಾ ಅವರಿಂದ ಸ್ಫೂರ್ತಿ ಪಡೆದ ಲೇಖಕರಲ್ಲಿ ಮುಖ್ಯರಾದವರು ಶಿವಮೊಗ್ಗದಿಂದ ಬಂದ ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಹಾಗೂ ಯು.ಆರ್. ಅನಂತಮೂರ್ತಿ. ಜಾತಿ ವಿರೋಧಿ ನಿಲುವು, ಸಮ ಸಮಾಜದ ಕನಸು ಇವರ ಚಿಂತನೆಯ ಕೇಂದ್ರದಲ್ಲಿದ್ದವು. ಸಮ ಸಮಾಜದ ಆಲೋಚನೆ ಹನ್ನೆರಡನೆಯ ಶತಮಾನದ ಬಸವಣ್ಣನವರವರೆಗೂ ಹೋಗುತ್ತದೆ. ತಂದೆಯಂತೆಯೇ ಕನ್ನಡದಲ್ಲಿ ಬರೆಯುವುದನ್ನು ಆಕೆ ರೂಢಿ ಮಾಡಿಕೊಳ್ಳಲು ಕಾರಣವೆಂದರೆ ಸಾಂಸ್ಕೃತಿಕವಾಗಿ ಇಲ್ಲಿ ಬೇರೂರಿದ ಜಾತ್ಯತೀತ ಧೋರಣೆಯನ್ನು ಸ್ಪಷ್ಟವಾಗಿ ಬಿತ್ತರಿಸುವುದು..... ವರ್ಷದ ಈ ಕಾಲದಲ್ಲಿ 'ಗೌರಿ'ಯ ಆಗಮನವನ್ನು ಜನರು ಸ್ವಾಗತಿಸುತ್ತಾರೆ. ಆಕೆಯನ್ನು ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ದುರ್ಗಾ, ಪಾರ್ವತಿ, ಶಕ್ತಿ, ಭವಾನಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. 'ಲಂಕೇಶ್' ಅಂದರೆ ರಾವಣ ತಾನೆ? ಪರಶಿವನ ಪರಮಭಕ್ತ ಆತ. ಗೌರಿ ಅಂದರೆ ರಾವಣನ ಆರಾಧಕರನ್ನು ನೆನಪಿಸಿದಂತೆ. ಏಕರೂಪಿ ಹಿಂದುತ್ವಕ್ಕೆ ಸೆಡ್ಡು ಹೊಡೆಯುವಂಥ ಕಲ್ಪನೆಯಿದು'.

ಪ್ರೊ.ವಿ.ಎಸ್.ಶ್ರೀಧರ್ ಇಂಗ್ಲಿಷ್ ಪ್ರಾಧ್ಯಾಪಕರು ಹಾಗೂ ಮಾನವ ಹಕ್ಕುಗಳ ಹೋರಾಟಗಾರರು. ಗೌರಿ ಲಂಕೇಶ್‌ರನ್ನು ಹತ್ತಿರದಿಂದ ಕಂಡಿದ್ದ ಅವರ ಅಭಿಪ್ರಾಯವಿದು: '೨೦೦೦ನೇ ಇಸವಿಯಲ್ಲಿ ಲಂಕೇಶರು ತೀರಿಕೊಂಡಾಗ ಕನ್ನಡ ಪತ್ರಿಕೋದ್ಯಮವನ್ನು ಮುಂದುವರಿಸುವುದಕ್ಕೆ ಗೌರಿ ದೆಹಲಿಯಿಂದ ಬೆಂಗಳೂರಿಗೆ ಬಂದರು. ಕನ್ನಡದಲ್ಲಿ ಬರೆದು ಆಕೆಗೆ ಅಭ್ಯಾಸವೇ ಇರಲಿಲ್ಲ. ತನ್ನ ತಂದೆ ಲಂಕೇಶ್‌ರ ಹೆಸರನ್ನು ಉಳಿಸಬೇಕೆಂಬ ಉತ್ಕಟವಾದ ಇಚ್ಛೆಯೇ ಆಕೆಗೆ ಪ್ರೇರಣೆಯಾಗಿತ್ತು. ಬಸವನಗುಡಿಯ ಕಚೇರಿಯಲ್ಲಿ ಗೌರಿ ತನ್ನ ತಂದೆಯ ಮೇಜು ಮತ್ತು ಕುರ್ಚಿಯ ಬಳಿ ಪುಟ್ಟ ಮೇಜು ಕುರ್ಚಿ ಹಾಕಿಕೊಂಡು ಕೂರುತ್ತಿದ್ದರೆ ವಿನಾ ತಂದೆಯ ಕುರ್ಚಿಯಲ್ಲಿ ಎಂದೂ ಕೂರಲಿಲ್ಲ. ಆಕೆ ಕುಳಿತುಕೊಳ್ಳುತ್ತಿದ್ದ ಕುರ್ಚಿಯ ಹಿಂದೆ ಗೋಡೆಯ ಮೇಲೆ ಲಂಕೇಶ್‌ರ ವಿಶಾಲವಾದ ಭಾವಚಿತ್ರ; ಗೌರಿಗೆ ಅದರಿಂದ ಒಂದು ತರಹ ಪ್ರಭಾವಳಿ ದೊರೆತಿತ್ತು. ಕನ್ನಡವನ್ನು ರೂಢಿಸಿಕೊಳ್ಳಬೇಕಾಗಿತ್ತು. ಆಕೆ; ಚೆನ್ನಾಗಿಯೇ ಕರಗತ ಮಾಡಿಕೊಂಡರು.

'ಕ್ರಮೇಣ ಆಕೆ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಧ್ವನಿಯಾದರು. ಪತ್ರಕರ್ತರು ಹಾಗೂ ಮಾನವ ಹಕ್ಕುಗಳ ಹೋರಾಟಗಾರರ ಒಂದು ತಂಡದೊಡನೆ ಮಲೆನಾಡಿನ ಕಾಡನ್ನು ಪ್ರವೇಶಿಸಿ ಅಲ್ಲಿ ನಕ್ಸಲರನ್ನು ಭೇಟಿ ಮಾಡಿ ಅವರ ಬೇಡಿಕೆಯ ಬಗ್ಗೆ ಒಂದು ವರದಿ ತಯಾರಿಸಲು ಮುಂದಾದರು. ಅಲ್ಲಿ ಸಾಕೇತ್ ರಾಜನ್‌ರ ಭೇಟಿಯಾಯಿತು. ಸಶಸ್ತ್ರ ಹೋರಾಟದ ಬಗ್ಗೆ ಗೌರಿಯ ನಿಲುವು ಸ್ಪಷ್ಟವಾಗಿತ್ತು. ಅದನ್ನು ಆಕೆ ಒಪ್ಪುವಂತಿರಲಿಲ್ಲ.

'ನಕ್ಸಲ್ ಸಮಸ್ಯೆಯನ್ನು ಕೇವಲ ಕಾನೂನು ಸುವ್ಯವಸ್ಥೆಯ ಸಮಸ್ಯೆಯಾಗಿ ನೋಡದೆ ಅದನ್ನೊಂದು ಸಮಾಜೋ–ಆರ್ಥಿಕ ಸಮಸ್ಯೆಯಾಗಿ ನೋಡಬೇಕೆಂಬುದು ಗೌರಿಯ ಇರಾದೆಯಾಗಿತ್ತು. ಆಕೆ ಹೋರಾಟಗಾರ್ತಿಯಾಗಿದ್ದಾಗ್ಯೂ ತನ್ನ ಹಳೆಯ ಸ್ನೇಹಿತರಿಂದ ದೂರವಾಗಿರಲಿಲ್ಲ. ಹೋರಾಟ ಮತ್ತು ಪತ್ರಿಕೋದ್ಯಮದ ಜವಾಬ್ದಾರಿಯ ನಡುವೆ ತನ್ನ ತಂಗಿ ಮಗಳಾದ ಇಶಾಳನ್ನು ಮರೆತಿರಲಿಲ್ಲ. ತನ್ನ ಮಗಳಂತೆಯೇ ಆಕೆಯನ್ನು ಪ್ರೀತಿಸಿದರು. ತನ್ನ ಟ್ವೀಟ್‌ಗಳಲ್ಲಿ ಮತ್ತು ಸಾರ್ವಜನಿಕ ಚರ್ಚೆಗಳಲ್ಲಿ ಸ್ವಲ್ಪ ಪಟ್ಟು ಬಿಡದವರಂತೆ ಗೌರಿ ಕಾಣಿಸಿಕೊಂಡಿದ್ದರೂ ಅಂತರ್ಯದಲ್ಲಿ ಅಪರಿಮಿತವಾದ ಹೆಂಗರುಳು; ವಿಶೇಷವಾಗಿ ತರುಣ ಹೋರಾಟಗಾರರನ್ನು ಕಂಡರೆ ಅವರಲ್ಲಿ ಮಾತೆಯ ಮಮತೆ ಕಾಣಿಸಿಕೊಳ್ಳುವುದು.

ಗೌರಿ ಒಬ್ಬ ಮಾಮೂಲಿ ಪತ್ರಕರ್ತೆಯಾಗಿದ್ದರೆ ಈ ಪ್ರಮಾಣದಲ್ಲಿ ಜನರ ಸಂತಾಪ ಹರಿದು ಬರುತ್ತಿರಲಿಲ್ಲ. ಆಕೆ ಪ್ರತಿನಿಧಿಸಿದ್ದ ಮೌಲ್ಯಗಳನ್ನು ಜನತೆ ಗೌರವಿಸಿದೆ. ಆಕೆಯ ಸಾವು ಒಂದು ದೊಡ್ಡ ಸಂದೇಶವನ್ನು ಸಾರಿದೆ; ಅದೇಂದರೆ: ಏನೇ ಬರಲಿ ವಿಶಾಲ ಜನಸ್ತೋಮದ ಒಳಿತಿಗೆ ಜೀವನವನ್ನು ಮುಡಿಪಾಗಿಡಿ; ಅದರಿಂದ ಇನ್ನಷ್ಟು ಗೌರಿಯರು ಹುಟ್ಟಿಕೊಳ್ಳುತ್ತಾರೆ.'

'ಗೌರಿಯನ್ನು ಕೊಂದವರು ಯಾರು?'' ಎಂಬ ಕೂಗು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಕೇಳಿ ಬರುತ್ತಿದೆ. ಈ ಪ್ರಕರಣದ ಕೊಲೆಗಡುಕರನ್ನು ಪತ್ತೆ ಮಾಡಿದರೆ ದಾಭೋಲ್ಕರ್, ಪನ್ಸಾರೆ ಹಾಗೂ ಕಲಬುರ್ಗಿಯವರಿಗೂ ಸ್ವಲ್ಪ ನ್ಯಾಯ ದೊರಕಿಸಿದಂತಾಗುವುದು.

ಮಾನವತೆಯ ಮರುಹುಟ್ಟಿಗಾಗಿ ಹೋರಾಟ ಅನಿವಾರ್ಯ

ಟಿ.ಎಂ.ಕೃಷ್ಣ

ಕರ್ನಾಟಕ ಸಂಗೀತಗಾರರು ಹಾಗೂ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತರು

ಇದೊಂದು ಪ್ರೇಕ್ಷಕರಿಲ್ಲದ ಸ್ವಗತವೇ ಅಥವಾ ನನ್ನ ದೇಶದ ಜನತೆಗೆ ಒಂದು ಮನವಿಯೇ? ನನಗೆ ಗೊತ್ತಿಲ್ಲ. ಆದರೆ ನಾನು ಗಾಬರಿಯಾಗಿದ್ದೇನೆ. ಕಳೆದ ಕೆಲವು ದಿನಗಳು ನನ್ನ ಮನಸ್ಸು ಹಾಗೂ ಹೃದಯವನ್ನು ಹತಾಶೆಗೆ ತಳ್ಳಿವೆ; ಭರವಸೆ ಮುರುಟಿಹೋಗುತ್ತಿದೆ. ತಾವು ನಂಬಿದ ವಿಚಾರಗಳಿಗಾಗಿ ಕೊಲೆಯಾದವರಲ್ಲಿ ಗೌರಿ ಲಂಕೇಶ್ ಮೊದಲಿಗರೇನಲ್ಲ. ಆಕೆ ಸತ್ತ ಕ್ಷಣ, ನಾವು ಒಂದು ಸಮಾಜವಾಗಿ ಮಾನವೀಯತೆಯನ್ನು ಸಂಪೂರ್ಣ ಕಳೆದುಕೊಂಡ ಸ್ಥಿತಿಯನ್ನು ತಲುಪಿದ್ದೀವಾ? ಎನ್ನುವ ಬೆರಗನ್ನು ನನ್ನಲ್ಲಿ ಹುಟ್ಟಿಸುತ್ತಿದೆ.

ನಾವೆಲ್ಲಾ ಸಾಮೂಹಿಕವಾಗಿ ದ್ವೇಷವೆಂಬ ರಕ್ತದ ಮಡುವಿನಲ್ಲಿ ಮುಳುಗಿಹೋಗಿದ್ದೇವೇನೋ ಎನ್ನುವ ಭಾವ ನನ್ನಲ್ಲಿ ಮೂಡುತ್ತಿದೆ. ಕಳೆದ ಹಲವು ವರ್ಷಗಳಿಂದ ಈ ದೇಶದಲ್ಲಿ ತಿನ್ನುವ ಆಹಾರಕ್ಕಾಗಿ, ಅವರ ನಂಬಿಕೆಗಳಿಗಾಗಿ, ಬಹುಸಂಖ್ಯಾತರ ನಿಲುವನ್ನು ಪ್ರಶ್ನಿಸಿದ್ದಕ್ಕಾಗಿ ಮತ್ತು ಅವರು ಅವರಂತೆ ಇರುವುದಕ್ಕಾಗಿಯೇ ಜನರನ್ನು ಕೊಲೆ ಮಾಡಲಾಗುತ್ತಿದೆ. ದಂಗೆಗಳು ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಅಥವಾ ಘಟನೆಗಳಿಗೆ ಸೀಮಿತವಾಗಿರುತ್ತವೆ. ಈ ಮೇಲಿನ ಘಟನೆಗಳು ಹಾಗಲ್ಲ, ಇಡೀ ದೇಶದ ಉದ್ದಗಲಕ್ಕೂ ಮನಸೋಇಚ್ಛೆ ನಡೆಯುತ್ತಿವೆ. ಪ್ರತಿ ಬಾರಿ ಇಂತಹ ಘಟನೆಯ ಬಗ್ಗೆ ಓದಿದಾಗಲೂ ಅದು ಯಾರೋ ಕೆಲವರ ಕೈವಾಡ ಎಂದು ಹೇಳ ಲಾಗುತ್ತಿದೆ. ಅಂತಹ ಸಣ್ಣ ಗುಂಪುಗಳು ಹೇರಳವಾಗಿಬಿಟ್ಟಿವೆ, ನಮ್ಮ ಸುತ್ತ ಹರಡಿಕೊಂಡಿವೆ. ಮನುಷ್ಯನ ಜೀವವನ್ನು ಕಬಳಿಸುವ ದಾಹದಲ್ಲಿ, ಯಾವ ಹೆದರಿಕೆಯೂ ಇಲ್ಲದೆ ನಿರತರಾಗಿರುವ ಜನ ನಮ್ಮ ಸುತ್ತ ಆವರಿಸಿ ಕೊಳ್ಳುತ್ತಿದ್ದಾರೆ ಎಂದು ಭಾಸವಾಗುತ್ತಿದೆ. ಹಾಗೆ ಹಿಂಸೆಯ ಮನಃಸ್ಥಿತಿ ಯವರು ತುಂಬಾ ಮಂದಿಯಾಗಿಬಿಟ್ಟಿದ್ದಾರೆ. ಅವರೆಲ್ಲರೂ ನಮ್ಮ ಮನಸ್ಸಿನೊಳಗಿನ ಭಾವನೆಗಳನ್ನು ಕಾರ್ಯಗತಗೊಳಿಸುವ ಏಜೆಂಟರುಗಳಾಗಿದ್ದಾರೆ. ಆ ಧ್ವನಿಗಳು ನಮ್ಮ ಮನಸ್ಸಿನಲ್ಲಿಯೇ ಇವೆ. 'ಅವರನ್ನು' ಕಂಡಾಗ, ಅವರ ಮಾತುಗಳನ್ನು ನೋಡಿದಾಗ, ಅವರನ್ನು ಕುರಿತು ಓದಿದಾಗಲೆಲ್ಲಾ ನಮ್ಮೊಳಗಿನ ಈ ದನಿ ಹೊರಬರುತ್ತದೆ. ನಾವು ಹೇಳದೆ ಮುಚ್ಚಿಟ್ಟುಕೊಂಡಿರುವ ಈ ಭಾವನೆಗಳನ್ನು ಯಾರಾದರೂ ಕಾರ್ಯಗತಗೊಳಿಸಿದಾಗ, ಸಂತಸದಿಂದ ನಮ್ಮ ಹೃದಯ ಬಿರಿಯುತ್ತದೆ. ಇದು ನನ್ನಲ್ಲಿ ಹೆದರಿಕೆ ಹುಟ್ಟಿಸುತ್ತಿದೆ.

> **ನಮ್ಮ ಪ್ರಸ್ತುತ ಸರ್ಕಾರ ನೋಡಿದಾಗ ನನಗೆ ಜಾರ್ಜ್ ಆರ್ವೆಲ್ಲನ ೧೯೮೪ ಕೃತಿ ನೆನಪಾಗುತ್ತದೆ. ಬಿಜೆಪಿ ಹಾಗೂ ಅದರ ಪರಿವಾರ ತಮ್ಮ ಬೆಂಬಲಿಗರ ಮನಸ್ಸನ್ನು ಮಾತ್ರ ವಿಷಪೂರಿತವನ್ನಾಗಿಸಿಲ್ಲ, ಅದಕ್ಕಿಂತ ದೊಡ್ಡ ಗುರಿಯನ್ನು ಸಾಧಿಸಿವೆ. ಉಳಿದ ನಮ್ಮಂತಹವರನ್ನೂ ಒಬ್ಬ ಆರ್‌ಎಸ್‌ಎಸ್ ಸದಸ್ಯ ಸತ್ತಾಗ ಅನುಕಂಪ ತೋರಿಸದಷ್ಟು ಅಮಾನವೀಯಗೊಳಿಸಿದ್ದಾರೆ. ಇದು ಅವರ ಅಖಂಡ ಹಿಂದೂ ರಾಷ್ಟ್ರದ ಕಲ್ಪನೆಯನ್ನು ಬಲಗೊಳಿಸುತ್ತದೆ ಮತ್ತು ರಾಜಕೀಯವಾಗಿ ಸಲೀಸು ಮಾಡುತ್ತದೆ. ಈ ವಿಷಚಕ್ರವನ್ನು ನಿಲ್ಲಿಸಬೇಕು.**

ಎಲ್ಲಾ ಸಂಸ್ಕೃತಿ, ಧರ್ಮ, ವರ್ಗ, ಲಿಂಗ, ವಯಸ್ಸಿನ ಜನ ಹಾಗೂ ಸುಶಿಕ್ಷಿತರು ಹೀಗೆ ಅಬ್ಬರಿಸುತ್ತಿದ್ದಾರೆ. ನಮಗೆಲ್ಲಾ ಏನಾಗಿದೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಈ ದುಷ್ಟತನ, ಈ ದ್ವೇಷ ಹಾಗೂ ಕೊಲೆಬಾಕತನ, ಸತ್ತವರ ಮೇಲೆ ಕುಣಿದಾಡುವ ಪರಿ, ನಮ್ಮ ಮಾತುಗಳಲ್ಲಿ ಕಾಣಿಸಿಕೊಳ್ಳುವ ವಿಕೃತ ನಗು ಹಾಗೂ ಈ ಪೈಶಾಚಿಕ ಕೃತ್ಯ ನೋಡಿ ಸಂತೋಷದಿಂದ ಸಂಭ್ರಮಿಸುವುದನ್ನು ನೋಡಿದರೆ ನನಗೆ ನಡುಕವಾಗುತ್ತದೆ. ಸ್ವತಂತ್ರ ಭಾರತವು ಮುಸ್ಲಿಮ್, ಹಿಂದೂ, ಸಿಖ್ಖರನ್ನು ಸಾಮೂಹಿಕವಾಗಿ ಕೊಲ್ಲುವ ನೆಲವಾಗಿಬಿಟ್ಟಿದೆ. ಇವೆಲ್ಲಾ ಆಯಾ ಸಂದರ್ಭದ ರಾಜಕೀಯ ನಾಯಕರುಗಳು ಪ್ರಚೋದಿಸುವ ಹಾಗೂ ಯೋಜಿಸುವ ಕೃತ್ಯಗಳು. ಬಹುಶಃ ನಾವು ಈ ಎಲ್ಲಾ ಕಗ್ಗೊಲೆಗಳಿಂದ ನಿಜವಾಗಿ ಚೇತರಿಸಿಕೊಂಡಿಲ್ಲ ಅಥವಾ ಗುಣಮುಖರಾಗಿಲ್ಲವೆನಿಸುತ್ತದೆ. ಭಯಂಕರವಾಗಿ ಚೂರುಚೂರಾಗಿ, ಛಿದ್ರಗೊಂಡ ಜೀವಿಗಳಾಗಿ ನಾವು ಬದುಕುತ್ತಿದ್ದೇವೆ. 'ನಮ್ಮದು ಬಹು ಸಂಸ್ಕೃತಿಯ ದೇಶ' ಎಂದು ನಾವಾಡುವ ಮಾತುಗಳೆಲ್ಲಾ ಕೇವಲ ನಕಲಿ ಮಾತುಗಳೇ?

ನಾನು ಈ ಎಲ್ಲ ಚಿಂತನೆಗಳನ್ನೂ ಈಗ ಪರಿಶೀಲಿಸುವುದಕ್ಕೆ ಹೋಗುವುದಿಲ್ಲ. ನಮಗಿಂತ ಭಿನ್ನ ಎನ್ನುವ ಕಾರಣಕ್ಕೆ ಜನರನ್ನು ಗುಂಡಿಕ್ಕಿ ಕೊಲ್ಲುತ್ತಿರುವ ಸಂದರ್ಭದಲ್ಲಿ ಇಂತಹ ಚಿಂತನೆಗೆ ಅರ್ಥವಿಲ್ಲ. ಎಂ. ಎಂ. ಕಲಬುರ್ಗಿ, ನರೇಂದ್ರ ದಾಭೋಲ್ಕರ್, ಗೋವಿಂದ ಪನ್ಸಾರೆ ಹಾಗೂ ಗೌರಿ ಲಂಕೇಶ್ ಇವರನ್ನೆಲ್ಲಾ ಕೊಂದವರು ನಮ್ಮ ಸಮಾಜ ಅವರಿಗಾಗಿ ರೂಪಿಸಿದ್ದ ಯೋಜನೆಯನ್ನು ಕಾರ್ಯಗತಗೊಳಿಸುವ ಸಾಧನಗಳು ಅಷ್ಟೆ.

ಯಾರು ಹೊಣೆ?

ನಾನು ನರೇಂದ್ರ ಮೋದಿಯವರು, ಭಾರತೀಯ ಜನತಾ ಪಕ್ಷ, ರಾಷ್ಟ್ರೀಯ ಸ್ವಯಂ ಸೇವಕ ಸಂಘ, ವಿಶ್ವ ಹಿಂದೂ ಪರಿಷದ್ ಅಥವಾ ಅವುಗಳ ಸೋದರ ಸಂಸ್ಥೆಗಳ ಬೆಂಬಲಿಗನಲ್ಲ ಎನ್ನುವುದು ತಿಳಿದಿರುವ ಸಂಗತಿ. ಈಗ ಅದು ಕೇವಲ ರಾಜಕೀಯ ಅಪ್ರಿಯತೆಯ ವಿಷಯವಲ್ಲ. ಈ ದೇಶದಲ್ಲಿ ಧಾರ್ಮಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ದ್ವೇಷವನ್ನು ಹರಡುತ್ತಿರುವುದಕ್ಕೆ ನಾನು ಅವರನ್ನು ನೈತಿಕವಾಗಿ ಹೊಣೆಗಾರರನ್ನಾಗಿಸುತ್ತೇನೆ. ಇದನ್ನು ನಾನು ಬಲವಾಗಿ ಹೇಳುತ್ತೇನೆ. ಅವರು ನಮ್ಮ ಮನಸ್ಸಿನೊಂದಿಗೆ ಆಟವಾಡುತ್ತಿದ್ದಾರೆ. ಒಬ್ಬ ಕೊಲೆಯನ್ನು ಖಂಡಿಸುತ್ತಾನೆ, ಮತ್ತೊಬ್ಬ ಮೌನವಾಗಿರುತ್ತಾನೆ, ಇನ್ನೊಬ್ಬ ಪ್ರಚೋದನಕಾರಿ ಹೇಳಿಕೆ ನೀಡುತ್ತಾನೆ, ಮಗದೊಬ್ಬ ಅದಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ ಅನ್ನುತ್ತಾನೆ. ಈ ಚದುರಂಗದಾಟ ನಡೆಯುತ್ತಿರುವಾಗಲೇ, ಅವರ ಆನ್‌ಲೈನ್ ಹಿಂಬಾಲಕರು ಮನಸೋಇಚ್ಛೆ ಮಾತನಾಡುತ್ತಾರೆ. ಇವನ್ನೆಲ್ಲಾ ನೋಡಿಕೊಂಡು ಪ್ರಧಾನ ಮಂತ್ರಿಗಳು ಏನೂ ಮಾತನಾಡದೆ ಸುಮ್ಮನಿರುತ್ತಾರೆ, ದಿವ್ಯ ಮೌನ ತಳೆದಿರುತ್ತಾರೆ ಅಥವಾ ಮಾತನಾಡಿದರೂ ಅದು ಕೇವಲ ಔಪಚಾರಿಕವಾಗಿರುತ್ತದೆ.

ನಮ್ಮ ಪ್ರಸ್ತುತ ಸರ್ಕಾರ ನೋಡಿದಾಗ ನನಗೆ ಜಾರ್ಜ್ ಆರ್ವೆಲ್ಲನ '೧೯೮೪' ಕೃತಿ ನೆನಪಾಗುತ್ತದೆ. ಬಿಜೆಪಿ ಹಾಗೂ ಅದರ ಪರಿವಾರ ತಮ್ಮ ಬೆಂಬಲಿಗರ ಮನಸ್ಸನ್ನು ಮಾತ್ರ ವಿಷಪೂರಿತವನ್ನಾಗಿಸಿಲ್ಲ, ಅದಕ್ಕಿಂತ ದೊಡ್ಡ ಗುರಿಯನ್ನು ಸಾಧಿಸಿವೆ. ಉಳಿದ ನಮ್ಮಂತಹವರನ್ನೂ ಒಬ್ಬ ಆರ್‌ಎಸ್‌ಎಸ್ ಸದಸ್ಯ ಸತ್ತಾಗ ಅನುಕಂಪ ತೋರಿಸದಷ್ಟು ಅಮಾನ ವೀಯಗೊಳಿಸಿದ್ದಾರೆ. ಇದು ಅವರ ಅಖಂಡ ಹಿಂದೂ ರಾಷ್ಟ್ರದ ಕಲ್ಪನೆಯನ್ನು ಬಲಗೊಳಿಸುತ್ತದೆ ಮತ್ತು ರಾಜಕೀಯ ವಾಗಿ ಸಲೀಸು ಮಾಡುತ್ತದೆ. ಈ ವಿಷಚಕ್ರವನ್ನು ನಿಲ್ಲಿಸ ಬೇಕು. ಮತ್ತೆ ಅನುಕಂಪ, ನೈತಿಕತೆ ಹಾಗೂ ಉದಾತ್ತ ಭಾವನೆಗಳನ್ನು ಸ್ಥಾಪಿಸಬೇಕು ಎಂಬುದು ನನಗೆ ಗೊತ್ತು. ಆದರೆ ಹೇಗೆ ಎಂಬುದು ತಿಳಿಯುತ್ತಿಲ್ಲ.

ನಾನು ಸಿಟ್ಟಾಗಿದ್ದೇನೆ, ಅಸಹಾಯಕನಾಗಿದ್ದೇನೆ, ದುಃಖಿತನಾಗಿದ್ದೇನೆ. ಆದರೆ ಈ ಅಧೋಗತಿಯಿಂದ ಮಾನವೀಯತೆ ಮತ್ತೆ ಮರುಹುಟ್ಟು ಪಡೆಯುವ ತನಕ ನಾನು ಮಾತನಾಡುತ್ತಿರುತ್ತೇನೆ, ಬರೆಯುತ್ತಿರುತ್ತೇನೆ, ಪ್ರಶ್ನಿಸುತ್ತಿರುತ್ತೇನೆ, ನಂಬಿಕೆ ಇಟ್ಟುಕೊಂಡಿರು ತ್ತೇನೆ, ಹೋರಾಡು ತ್ತಿರುತ್ತೇನೆ ಹಾಗೂ ಹಾಡುತ್ತಿರುತ್ತೇನೆ.

ಅನುವಾದ:ಟಿ.ಎಸ್.ವೇಣುಗೋಪಾಲ್, **ಕೃಪೆ: ಸ್ಕ್ರಾಲ್ ಪತ್ರಿಕೆ**